AA

# G.P. 2008

## ಕನ್ನಡ

## (ಕಡ್ಡಾಯ)

ಸಮಯ : 3 ಗಂಟೆ ] [ಗರಿಷ್ಠ ಅಂಕಗಳು : 150

### ಸೂಚನೆಗಳು

(1) ಅಭ್ಯರ್ಥಿಗಳು ಎಲ್ಲಾ ಭಾಗಗಳನ್ನು ಮತ್ತು ಪ್ರಶ್ನೆಗಳನ್ನು ಉತ್ತರಿಸಬೇಕು.

(2) ಪ್ರತಿ ಪ್ರಶ್ನೆಗೆ ನಮೂದಿಸಲಾದ ಅಂಕಗಳನ್ನು ಪ್ರಶ್ನೆಯ ಕೊನೆಯಲ್ಲಿ ನೀಡಲಾಗಿದೆ.

(3) ನಿರ್ದಿಷ್ಟವಾಗಿ ಸೂಚಿಸದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.

(4) ಭಾಗ ಎ ಪ್ರಶ್ನೆ ಸಂಖ್ಯೆ **3** ಕ್ಕೆ ಸಂಬಂಧಿಸಿದಂತೆ ಪ್ರೆಸಿ ಗದ್ಯಭಾಗವು ಸೂಚನೆಗಿಂತ ಬಹಳ ಹೆಚ್ಚು ಅಥವಾ ಕಡಮೆಯಾದಲ್ಲಿ ಅಂಕಗಳನ್ನು ಕಳೆಯಲಾಗುವುದು.

(5) ಭಾಗ ಎ ಪ್ರಶ್ನೆ ಸಂಖ್ಯೆ **3** ನ್ನು ನೀಡಲಾದ ಪ್ರೆಸಿ ಹಾಳೆಯಲ್ಲಿಯೇ ಉತ್ತರಿಸತಕ್ಕದ್ದು.

(6) ಪತ್ರವನ್ನು ಬರೆಯುವ ಪ್ರಶ್ನೆಗಳನ್ನು ಉತ್ತರಿಸುವಾಗ ನಿಮ್ಮ ಸಹಿಯನ್ನು ಹಾಕುವುದನ್ನಾಗಲೀ ಅಥವಾ ನಿಮ್ಮ ಹೆಸರು/ವ್ಯಕ್ತಿತ್ವವನ್ನು ನಮೂದಿಸುವುದನ್ನಾಗಲೀ ಮಾಡಕೂಡದು.

SEAL

**Note :** *The English version of the instructions is printed on the back cover of this question paper.*

## ಭಾಗ ಎ

1. ಕೆಳಗಿನ ಯಾವುದಾದರೂ ಒಂದರ ಬಗ್ಗೆ ಸುಮಾರು 300 ಶಬ್ದಗಳಲ್ಲಿ ಒಂದು ಪ್ರಬಂಧ ಬರೆಯಿರಿ : 25

   (ಅ) ಕನ್ನಡ ಭಾಷೆಯ ಅಭಿವೃದ್ಧಿ

   (ಆ) ಕಂಪ್ಯೂಟರ್ ಬಳಕೆಯ ಮಹತ್ವ

   (ಇ) ಚುನಾವಣಾ ಸುಧಾರಣೆ

   (ಈ) ನಿರುದ್ಯೋಗ ಸಮಸ್ಯೆ

   (ಉ) ನಗರೀಕರಣ

   (ಊ) ಹೆಚ್ಚುತ್ತಿರುವ ಅಪರಾಧಗಳು

2. ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ : 25

ಸಂಸ್ಕೃತಿ ಎಂಬುದು ಒಂದು ಜನಾಂಗದ ವರ್ತನೆಗಳ ಒಟ್ಟು ಮೊತ್ತವೆಂದು ಪರಿಗಣಿಸುವುದಾದರೆ ಅಂತಹ ಅನೇಕ ನಡಾವಳಿಗಳಲ್ಲಿ ನಂಬಿಕೆಗಳು ಪ್ರಧಾನಪಾತ್ರವನ್ನು ವಹಿಸುತ್ತವೆ. ಅವು ಆದಿಕಾಲದ ಗುಹಾಮಾನವನಿಂದ ಹಿಡಿದು ಆಧುನಿಕಯುಗದ ಗಗನಗಾಮಿಯವರೆಗೂ ತಮ್ಮ ಕಬಂಧಬಾಹುವನ್ನು ಚಾಚಿಕೊಂಡಿವೆ.

ನಂಬಿಕೆಗಳು ಮಾನವನ ಬದುಕಿನ ಬೆನ್ನೆಲುಬುಗಳು. ಅವು ಅವನ ಹುಟ್ಟಿನಿಂದ ಹಿಡಿದು ಅವನು ಮಣ್ಣಿನಲ್ಲಿ ಮಣ್ಣಾಗುವವರೆಗೂ ಒಡಗೂಡಿಯೇ ಬರುತ್ತವೆ. ಈ ನಂಬಿಕೆಗಳು ಒಂದು ಮಾನಸಿಕ ಒಪ್ಪಂದವಾಗಿದ್ದು ಇವು ಶ್ರದ್ಧೆಯನ್ನವಲಂಬಿಸಿ ಕ್ರಿಯಾತ್ಮಕವಾಯಿತೆಂದರೆ ಅವು ಆಚರಣೆಯಾಗುತ್ತವೆ. ಜನಪದರಿಗೆ ಈ ಆಚರಣೆಗಳು ಅವರ ಜೀವನ ವಿಧಾನವೇ ಆಗಿದ್ದು ಅವು ಪ್ರಶ್ನಾತೀತವಾಗಿ ಉಸಿರಾಡುತ್ತಿರುತ್ತವೆ. ಒಮ್ಮೆ ನಂಬಿಕೆ ಸ್ಥಿರವಾಯಿತೆಂದರೆ ಅದರ ಆಚರಣೆ ಸಲೀಸಾಗಿ ನಡೆದುಹೋಗುತ್ತದೆ. ಆದರೆ ಎಲ್ಲ ನಂಬಿಕೆಗಳೂ ಆಚರಣೆಗಳಲ್ಲ; ಹಾಗೆಯೇ ನಂಬಿಕೆಗಳೆಲ್ಲ ಮೌಲ್ಯಗಳೂ ಅಲ್ಲ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಜನಪದರ ಜೀವನಮೌಲ್ಯಗಳು ನಂಬಿಕೆಗಳನ್ನು ಅವಲಂಬಿಸಿ ನಿಂತಿರುತ್ತವೆ. ಇಲ್ಲಿ ಸಮಷ್ಟಿಸಮ್ಮತಿಯ ಮುದ್ರೆಬಿದ್ದಾಗ ನಂಬಿಕೆ ಆಚರಣೆ ಆಗಬಹುದು; ಆಚರಣೆಯೇ ಮೌಲ್ಯವೂ ಆಗಬಹುದು.

ಆಚರಣೆಗಳು ಎಂದಿನಿಂದ ಪ್ರಾರಂಭವಾದವು ಎಂದು ಗೆರೆಕೊರೆದು ಹೇಳಲು ಸಾಧ್ಯವಿಲ್ಲವಾದರೂ ಅನಂತಪ್ರಕೃತಿಯ ಎದುರು ಅಸಹಾಯಕನಾಗಿ ನಿಂತ ಆದಿಮಾನವ ಅಗೋಚರ ಶಕ್ತಿಯನ್ನು ನಂಬಿದಂದಿನಿಂದ ಇವು ಹುಟ್ಟಿಕೊಂಡವೆಂದು ಹೇಳಬಹುದು. ಮಾನವನು ಆ ಅಗೋಚರಶಕ್ತಿಗಳನ್ನು ವಶಪಡಿಸಿಕೊಳ್ಳುವ ಹಾಗೂ ತೃಪ್ತಿಪಡಿಸುವ ಸಂಬಂಧದಲ್ಲಿ ತನಗೆ ಒದಗಬಹುದಾದ ಅಪಾಯಗಳಿಂದ ಪಾರಾಗಲು ಆಚರಣೆಗಳು ಹುಟ್ಟಿಕೊಂಡಿರಬಹುದು.

ಸಂಪ್ರದಾಯ ಮತ್ತು ಮನಸ್ಸುಗಳು ಎಲ್ಲೋ ಒಂದೆಡೆ ಸಂಧಿಸಿದಾಗ ಉಗ್ರ ಆಚರಣೆಗಳು ಜೀವಂತವಾಗುತ್ತವೆ. ಧರ್ಮ, ದೇವರುಗಳ ಸಂಬಂಧವಿರುವುದರಿಂದ ಇವು ಮತ್ತೂ ಸ್ಥಿರವಾಗುತ್ತವೆ. ಅಲ್ಲದೆ ಈ ಉಗ್ರ ಆಚರಣೆಗಳು ಶಕ್ತಿದೇವತೆಗಳ ಹಿನ್ನೆಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಆಚರಣೆಯ ಸಂದರ್ಭದಲ್ಲಿ ಹಿಂಸೆಯನ್ನು ಹಿಂಸೆ ಭಾವಿಸದಿದ್ದಾಗ ಮಾತ್ರ ಆಚರಣೆಗಳು ಜೀವಂತವಾಗಿರುತ್ತವೆ ಹಾಗೂ ಧರ್ಮಸಮ್ಮತವಾಗಿರುತ್ತವೆ. ಆಚರಣೆಯು ಹಿಂಸೆಯೇ ಆಗಿದೆ ಎನ್ನುವಾಗ ಅಂಥ ಆಚರಣೆ ಕಾಲಕ್ರಮದಲ್ಲಿ ಬಿಟ್ಟುಹೋಗುತ್ತದೆ ಇಲ್ಲವೇ ಸೌಮ್ಯರೂಪಕ್ಕಿಳಿಯುತ್ತದೆ. ಇದಕ್ಕೆ ಉದಾಹರಣೆಯೆಂದರೆ 'ಸಿಡಿ'. ಹಿಂದೆ ಜಾತ್ರೆಗಳ ಕಾಲದಲ್ಲಿ ಭಕ್ತರು ಬೆನ್ನುಹುರಿಮೂಳೆಗೆ ಕಬ್ಬಿಣದ ಕೊಕ್ಕೆ ಹಾಕಿ ಸಿಡಿ ಎತ್ತುತ್ತಿದ್ದರು. ಪ್ರಾಣಾಂತಿಕ ಭಯವನ್ನುಂಟು ಮಾಡುವಷ್ಟು ಉಗ್ರವಾಗಿದ್ದ ಅದು ಇತ್ತೀಚಿನ ದಿನಗಳಲ್ಲಿ ಮರೆಯಾಗುತ್ತಿದೆ. ಅಲ್ಲಲ್ಲಿ ಕಾಣಿಸಿಕೊಂಡರೂ ಕಬ್ಬಿಣದ ಕೊಕ್ಕೆಗೆ ಬದಲಾಗಿ ಸೊಂಟಕ್ಕೆ ಬಟ್ಟೆ ಸುತ್ತಿ ಸಿಡಿ ಆಡುತ್ತಿದ್ದಾರೆ.

***ಪ್ರಶ್ನೆಗಳು :***

(ಅ) ನಂಬಿಕೆಗಳು ಸಂಸ್ಕೃತಿಯೊಂದಿಗೆ ಹೇಗೆ ಸೇರಿಕೊಂಡಿವೆ ?

(ಆ) ನಂಬಿಕೆಗಳು ಆಚರಣೆಗಳಾಗಿ ಕಾಣಿಸಿಕೊಳ್ಳುವುದು ಯಾವಾಗ ?

(ಇ) ಆಚರಣೆಗಳು ಹುಟ್ಟಿಕೊಳ್ಳಲು ಕಾರಣವೇನಿರಬಹುದು ?

(ಈ) ಶಕ್ತಿದೇವತೆಗಳಿಗೆ ಸಂಬಂಧಿಸಿದ ಆಚರಣೆಗಳ ಸ್ವರೂಪ ಎಂಥದು ?

(ಉ) 'ಸಿಡಿ' ಆಚರಣೆಯು ಮರೆಯಾಗಲು ಅಥವಾ ಸೌಮ್ಯರೂಪಕ್ಕೆ ಬದಲಾಗಲು ಕಾರಣವೇನು ?

**3.** ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಸಂಗ್ರಹಿಸಿ ಬರೆಯಿರಿ. ಲೇಖನದ ಕೊನೆಯಲ್ಲಿ ನೀವು ಬಳಸಿರುವ ಶಬ್ದಗಳ ಸಂಖ್ಯೆಯನ್ನು ಸೂಚಿಸಿ. *25*

ವಿ.ಸೂ. : *ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.*

ಮಾನವನ ಉನ್ನತ ವಿಹಾರ ಸಾಧನೆಗಳಲ್ಲಿ ನಾಟಕಕಲೆಗೆ ಅಗ್ರಸ್ಥಾನ. ಗ್ರೀಕ್ ಮತ್ತು ಭಾರತೀಯರು ನಾಟಕಕಲೆಯನ್ನೇ ತಮ್ಮ ಸಂಸ್ಕೃತಿಯ ಮಾನದಂಡವನ್ನಾಗಿ ಮಾಡಿಕೊಂಡರು. ಈ ಸ್ಥಾನ ಚಲನಚಿತ್ರಕಲೆಗೆ ದೊರೆಯಲು ಸಾಧ್ಯವಿಲ್ಲದಿರುವುದಕ್ಕೆ ನಾಟಕಕಲೆಯ ಸ್ವರೂಪವೇ ಮೂಲಕಾರಣವೆನ್ನಬಹುದು. ನಾಟಕಕಲೆಯನ್ನು ಸ್ಥೂಲವಾಗಿ ನಾವು ಕಲೆಯೆಂದೂ ಚಲನಚಿತ್ರಕಲೆಯನ್ನು ಸಾಮೂಹಿಕಕಲೆಯೆಂದೂ ಕರೆಯಬಹುದು.

ನಾಟಕಕಲೆಯಲ್ಲಿ ಪ್ರಧಾನ ವ್ಯಕ್ತಿಗಳು ನಾಟಕಕಾರ ಮತ್ತು ನಟರು. ನಾಟಕ ಸಾಹಿತ್ಯ ಹಾಗೂ ಕಲಾದೃಷ್ಟಿಯಿಂದ ಉತ್ತಮವಾಗಿಲ್ಲದಿದ್ದರೆ ಪ್ರದರ್ಶನಪ್ರಯತ್ನ ವಿಫಲವಾಗುತ್ತದೆ. ಕಾಳಿದಾಸ, ಶೇಕ್ಸ್‌ಪಿಯರ್, ಮಾಲಿಯರ್‌ಗಳ ಕಾಲದ ಪ್ರದರ್ಶನಗಳಿಗಿಂತಲೂ ಇಂದಿನ ಪ್ರದರ್ಶನ ಹೆಚ್ಚು

ವೈಭವಯುತವಾಗಿದ್ದರೂ ಆ ನಾಟಕಗಳ ಚೇತೋಹಾರಿತ್ವವಾಗಲೀ ಸಾಹಿತ್ಯಕಲಾನೈಪುಣ್ಯವಾಗಲೀ ಇಂದಿನವುಗಳಿಗೆ ಇಲ್ಲದಿರುವುದಕ್ಕೆ ನಾಟಕಕಾರರ ಪ್ರತಿಭೆಯ ಪ್ರಮಾಣವೇ ಮೂಲಕಾರಣ.

ಚಲನಚಿತ್ರಗಳಲ್ಲಿ ಪ್ರಾಧಾನ್ಯ ನಾಟಕಕಾರನಿಗೂ ಅಲ್ಲ; ನಟರಿಗೂ ಅಲ್ಲ. ನಾಟಕಕಾರ, ನಟ, ಛಾಯಾಚಿತ್ರಗ್ರಾಹಕ, ಧ್ವನಿಗ್ರಾಹಕ, ಸಂಪಾದಕ ಇವರುಗಳ ಜಾಣ್ಮೆಯಿಂದ ತನ್ನ ದೃಷ್ಟಿಗೆ ಅಳವಡಿಸಿಕೊಳ್ಳಬಲ್ಲ ದಿಗ್ದರ್ಶಕ ಸರ್ವತಂತ್ರ ಸ್ವತಂತ್ರನಾಗಿದ್ದಾನೆ. ಅಭಿವ್ಯಕ್ತವಾಗಬೇಕಾದ ಪ್ರತಿಯೊಂದು ಅಂಶಕ್ಕೂ ನಾಟಕಕಾರ ಮಾತುಗಳನ್ನು ಬಳಸಿಕೊಳ್ಳಬೇಕು. ಚಲನಚಿತ್ರಗಳಲ್ಲಿ ಮಾತು ಗೌಣ, ದೃಶ್ಯ ಪ್ರಧಾನ. ದಿಗ್ದರ್ಶಕ ಎರಡೇ ಮಾತುಗಳನ್ನಾಡಿಸಿ ಉಳಿದೆಲ್ಲ ವಸ್ತುಗಳನ್ನು ಮೂಕದೃಶ್ಯಗಳಿಂದ ಪ್ರದರ್ಶಿಸಿ ತನ್ನ ಗುರಿಸಾಧಿಸಬಲ್ಲ. ನಾಟಕಕಲೆ ಬಿಡಿಬಿಡಿಯಾಗಿ ಮಾಡುವ ಕೆಲಸವನ್ನು ಚಲನಚಿತ್ರ ಇಡಿಯಾಗಿ ಮಾಡಲು ಪ್ರಯತ್ನಿಸುತ್ತದೆ.

ನಾಟಕಕಲೆ ವ್ಯಕ್ತಿಗಳನ್ನು ಅವಲಂಬಿಸಿದರೆ ಚಲನಚಿತ್ರಕಲೆ ಯಂತ್ರಗಳನ್ನವಲಂಬಿಸುತ್ತದೆ. ಉತ್ತಮ ನಾಟಕ, ಉತ್ತಮ ನಟರು ಇರಬಹುದು. ಅವರ ಕಲಾಸೇವೆ ಅದ್ವಿತೀಯವಾಗಿರಬಹುದು. ಛಾಯಾಗ್ರಾಹಕನಾಗಲಿ, ಧ್ವನಿಗ್ರಾಹಕನಾಗಲಿ, ಪ್ರಯೋಗಶಾಲೆಯ ವಿಜ್ಞಾನಿಯಾಗಲಿ ದಕ್ಷನಾಗಿಲ್ಲದಿದ್ದರೆ ಅವರ ಪ್ರಯತ್ನ ನಿಷ್ಪ್ರಯೋಜಕವಾಗುತ್ತದೆ. ರಜತಪರದೆಯ ಮೇಲೆ ಅಭಿನಯ ಕಾಣುವುದಿಲ್ಲ. ಮಾತು ಹಾಡುಗಳು ಸರಿಯಾಗಿ ಕೇಳಿಸುವುದಿಲ್ಲ. ರಂಗಭೂಮಿ ಈ ಇತಿಮಿತಿಗಳಿಂದ ದೂರವಾಗಿದೆ.

ಯಾಂತ್ರಿಕಸಾಧನವಾದ ಚಲನಚಿತ್ರಕಲೆಯನ್ನು ಯಂತ್ರದೃಷ್ಟಿಯಿಂದಲೇ ನೋಡಬೇಕು. ರಂಗಭೂಮಿಯ ಮೇಲೆ ಅಭಿನಯಿಸುವ ನಟ ಸ್ವತಂತ್ರನಾಗಿರುತ್ತಾನೆ. ಇಡಿಯ ರಂಗವನ್ನು ತನ್ನ ಚಲನವಲನಗಳಿಗೆ ಉಪಯೋಗಿಸಿಕೊಳ್ಳಲು ಅವನಿಗೆ ಸಾಧ್ಯ. ಚಲನಚಿತ್ರದ ನಟ ಕ್ಯಾಮರಾದ ಪರಿಮಿತಿಗೆ ಒಳಪಟ್ಟಿರಬೇಕು. ಅವನು ಕೈಕಾಲು ಅಲ್ಲಾಡಿಸಬೇಕಾದರೂ ಕ್ಯಾಮರಾವ್ಯಾಪ್ತಿಯನ್ನು ಲಕ್ಷ್ಯದಲ್ಲಿಟ್ಟಿರಬೇಕು. ಸ್ವಲ್ಪ ಹೆಚ್ಚುಕಡಿಮೆಯಾಯಿತೆಂದರೆ ತೆರೆಯ ಮೇಲೆ ಅವನ ಕೈಕಾಲುಗಳೇ ಕಾಣುವುದಿಲ್ಲ. ಈ ಸಂಕ್ಷಿಪ್ತವ್ಯೂಹದೊಳಗೆ ಸಿಕ್ಕಿಕೊಂಡ ನಟ ತನ್ನ ಅಭಿನಯ ಅಸಹಜವೂ ವಕ್ರವೂ ಆಗದಂತೆ ಎಚ್ಚರನಾಗಿರಬೇಕು.

ನಟನಂತೆ ನಾಟಕಕಾರನೂ ಯಂತ್ರಕ್ಕೆ ಬದ್ಧನಾಗಿರಬೇಕಾಗುತ್ತದೆ. ಸಿನಿಮಾದ ಸಿಲಲಾಯಿಡ್ ಫಿಲ್ಮ್ ಒಂದು ನಿಮಿಷಕ್ಕೆ ೯೦ ಅಡಿಗಳಷ್ಟು ಓಡುತ್ತದೆ. ಸುಮಾರು ೧೨೦೦೦ ಅಡಿಗಳ ಒಂದು ಚಿತ್ರ ಎರಡುಗಂಟೆ ೧೪ ನಿಮಿಷಗಳ ಕಾಲ ಓಡುತ್ತದೆ. ಈ ಎರಡುಗಂಟೆ ಹದಿನಾಲ್ಕು ನಿಮಿಷಗಳನ್ನು ನಾಟಕಕಾರ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ. ನಾಟಕದ ಸಂಭಾಷಣೆಯೊಂದಿಗೆ ಹಾಡುಗಳು ನೃತ್ಯ, ಮೂಕದೃಶ್ಯಗಳು, ನಿಶ್ಶಬ್ದ ಚಲನವಲನಗಳೆಲ್ಲಕ್ಕೂ ಅವಕಾಶ ಒದಗಿಸಬೇಕಾಗುತ್ತದೆ. ನಾಟಕಕಾರನ ಪಾಲಿಗೆ ಒದಗುವುದು ಮೂರನೆಯ ಒಂದು ಭಾಗ ಮಾತ್ರ. ಅಂದರೆ ಸುಮಾರು ನಾಲ್ಕು ಸಾವಿರ ಅಡಿಗಳು. ಈ ಕಾಲಾವಧಿಯಲ್ಲಿ ಸಮಸ್ತವಸ್ತುವನ್ನು ಅಡಕಿ, ಬೆಳೆಸಬೇಕಾದೆಡೆಗಳಲ್ಲಿ ಬೆಳೆಸಿ, ಸಂವಿಧಾನಗಳನ್ನು ಜೋಡಿಸಿ ಕಥೆಯನ್ನು ಮುಗಿಸಬೇಕಾಗುತ್ತದೆ. ಸಿನಿಮಾಕ್ಕೆ ಅವಶ್ಯಕವಾದ ವಸ್ತು-ಸಂಭಾಷಣೆಗಳನ್ನು ಸಿದ್ಧಗೊಳಿಸುವ ಬಗೆಯನ್ನು ನಾವು ಗಮನಿಸಿದರೆ ಈ ಅಂಶ ಹೆಚ್ಚು ವಿಶದವಾಗುತ್ತದೆ

4. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ : 25

Modern society is considered to be advanced and cultured, but it is not genuine. It is cultured like a cultured pearl. Few value genuine pearls today. The modern human being has weakened himself and his human nature by culturing it again and again, losing touch with nature and reality. In modern culture we live for showing off to others, not for serving others. But if you go to the mountains, no matter who you are, the first things they will ask you are, "Have you taken your food ? Do you have a place to stay ?" Anybody there will ask you these things, whether you are a friend or stranger.

In the mountain areas most influenced by modern culture however, lying and stealing have begun to occur.

[Turn over

## ಭಾಗ ಬಿ

**5.** ಕೆಳಗಿನವುಗಳಲ್ಲಿ **ಒಂದನ್ನು** ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ : *10*

(a) ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಶನ್ ಹಾವಳಿ

(b) ಶಬ್ದಮಾಲಿನ್ಯ

(c) ಸಾರ್ವತ್ರಿಕ ರಜಾದಿನಗಳು

**6.** ಕೆಳಗಿನವುಗಳಲ್ಲಿ **ಎರಡರ** ಅರ್ಥಸ್ವಾರಸ್ಯವನ್ನು ವಿವರಿಸಿ : *10*

(a) ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು

(b) ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸು

(c) ಅಟ್ಟಕ್ಕೆ ಹತ್ತಿದ ಮೇಲೆ ಏಣಿಯನ್ನು ಒದೆದರು

(d) ಬೆಂದ ಮನೆಯಲ್ಲಿ ಬೀಡಿ ಹಚ್ಚಿಕೊಂಡರು

**7.** ಕೆಳಗಿನ ನುಡಿಗಟ್ಟುಗಳಲ್ಲಿ **ಎರಡರ** ಅರ್ಥವನ್ನು ನೀಡಿ, ಅವನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ : *5*

(a) ಗುದ್ದಲಿ ಪೂಜೆ ಮಾಡು

(b) ಬೇಲಿಯಮೇಲೆ ಕುಳಿತಿರು

(c) ಸರ್ಪಗಾವಲು

(d) ತಂತಿಮೇಲಿನ ನಡಿಗೆ

(e) ಮುಖಕ್ಕೆ ಮಂಗಳಾರತಿ ಆಗು

**8.** ಕೆಳಗೆ ಬಿಟ್ಟಿರುವ ಖಾಲಿ ಜಾಗವನ್ನು ಭರ್ತಿಮಾಡಿ : *5*

(a) ಕದಂಬರ ರಾಜಧಾನಿ ಹಾಗೂ ಪಂಪಕವಿ ನೆನೆಸಿಕೊಂಡ ನಾಡು ..................... .

(b) ತೀರ ಇತ್ತೀಚೆಗೆ ಜ್ಞಾನಪೀಠ ಪ್ರಶಸ್ತಿಪಡೆದ ಕನ್ನಡ ಸಾಹಿತಿ ................. .

(c) ಕನ್ನಡ ವಿಶ್ವವಿದ್ಯಾಲಯವು ನೀಡುವ ಪ್ರಶಸ್ತಿಯ ಹೆಸರು ............... .

(d) ವಿವಾದಕ್ಕೆ ಕಾರಣವಾದ ಎಸ್.ಎಲ್. ಭೈರಪ್ಪನವರ ಇತ್ತೀಚಿನ ಕಾದಂಬರಿ ................. .

(e) 'ಉದಯವಾಗಲಿ ಚೆಲುವ ಕನ್ನಡನಾಡು' ಎಂಬ ನಾಡಗೀತೆಯನ್ನು ರಚಿಸಿದವರು ...................... .

## ಭಾಗ ಸಿ

**9.** ಕೆಳಗಿನವುಗಳಲ್ಲಿ **ಐದಕ್ಕೆ** ತತ್ಸಮ ರೂಪಗಳನ್ನು ನೀಡಿ : 5

(a) ಸಿರಿ

(b) ಹಬ್ಬ

(c) ಕಂಬ

(d) ಹರಯ

(e) ಹಕ್ಕಿ

(f) ಸಾವಿರ

(g) ದೆಸೆ

(h) ಮಿಗ

(i) ಹಸು

(j) ಜೋಗಿ

**10.** ಕೆಳಗಿನವುಗಳಲ್ಲಿ **ಐದಕ್ಕೆ** ತದ್ಭವ ರೂಪಗಳನ್ನು ನೀಡಿ : 5

(a) ಅಕ್ಷರ

(b) ಕಾವ್ಯ

(c) ಕುಂಭಕಾರ

(d) ಆಕಾಶ

(e) ಚಂದ್ರ

(f) ಸಿಂಹ

(g) ಶ್ರೇಷ್ಠಿ

(h) ಧನ

(i) ರಕ್ತ

(j) ಭೂಮಿ

**11.** ಕೆಳಗಿನ ವಾಕ್ಯಗಳಲ್ಲಿ ಕಂಡುಬರುವ ಕಾಗುಣಿತಾಕ್ಷರಗಳ ತಪ್ಪುಗಳನ್ನು ತಿದ್ದಿ ಬರೆಯಿರಿ : *10*

(a) ಅಥಿತಿಗಳನ್ನು ಉಪಚರಿಸುವುದು ನಮ್ಮ ಸಂಸ್ಕೃತಿಯ ಲಕ್ಷಣ.

(b) ವಿಧ್ಯಾರ್ಥಿಗಳು ಚೆನ್ನಾಗಿ ಒದಿದರೆ ಪರಿಕ್ಷೆಯಲ್ಲಿ ಪಾಸಾಗುತ್ತಾರೆ.

(c) ಉಪಾದ್ಯಾಯರು ಮಕ್ಕಳಿಗೆ ಕತೆಯನ್ನೇಳಿದರು.

(d) ದೇಶವು ದುರ್ಬಲವಾದರೆ ನಮ್ಮನ್ನು ರಕ್ಷಿಸಿಕೊಳ್ಳುವುದು ಕಷ್ಟವಾಗುತ್ತದೆ

(e) ನಮಗೆ ನೀಡಿದ ಹಾದರದ ಸ್ವಾಗತಕ್ಕಾಗಿ ನಿಮಗೆ ನಮ್ಮ ಕೃತಗ್ನತೆಗಳು.